# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಖಜಾನೆ-2 PFMS ಮಾಡ್ಯೂಲ್ ಅನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:-**

1. Eoffice ಕಡತ ಸಂಖ್ಯೆ:K-2 TNMCOMIS(mis)/6/2020.
2. ಸರ್ಕಾರದ ಆದೇಶ ಸಂ:ಆಇ 39 ಟಿಎಆರ್ 2022, ದಿ:28.04.2022.
3. Eoffice ಕಡತ ಸಂಖ್ಯೆ:K-2 TNMCOMIS(mis)/6/2020.

*********

ಪ್ರಸ್ತಾವನೆ;-

ಮೇಲೆ ಓದಲಾದ(1)ರ ಖಜಾನೆ ಆಯುಕ್ತರ ಕಡತದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ IFMS ಮಾಡ್ಯೂಲ್-ಮಾದರಿ 4 ಅನ್ನು ಅಳವಡಿಸಿಕೊಳ್ಳುವ ಸಲುವಾಗಿ ಬಿಡುಗಡೆಯಾಗುವ ಕೇಂದ್ರ ಮತ್ತು ರಾಜ್ಯದ ಪಾಲುಗಳನ್ನು ಪ್ರತಿ ಯೋಜನೆಗೆ ಗೊತ್ತುಪಡಿಸಿದ SNA ಖಾತೆಗೆ ಜಮೆ ಮಾಡುವುದು ಹಾಗೂ ಯೋಜನೆಗೆ ಸಂಬಂಧಿಸಿದ ಪಾವತಿಗಳನ್ನು ಈ SNA ಖಾತೆಯ ಮೂಲಕ ನಿರ್ವಹಿಸಲು ಅನುಮತಿಯನ್ನು ಕೋರಲಾಗಿತ್ತು.

ಮೇಲೆ ಓದಲಾದ(2)ರ ಆದೇಶದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು K-II PFMS ಮಾಡ್ಯೂಲ್‌ನಲ್ಲಿ SNA ಖಾತೆ ಮೂಲಕ ನಿರ್ವಹಿಸಲು ಅನುಕೂಲವಾಗುವಂತೆ K-II PFMS ಮಾಡ್ಯೂಲ್ ಅನ್ನು ಅನುಷ್ಠಾನಗೊಳಿಸಲು ತಾತ್ವಿಕ ಸಹಮತಿ ನೀಡಿ ಆದೇಶಿಸಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆ ಅನುಷ್ಠಾನಗೊಳಿಸಲು ಯೋಜನಾಧಿಕಾರಿಗಳು (ಇಲಾಖೆಗಳು) ಬ್ಯಾಂಕುಗಳಲ್ಲಿ ತೆರೆಯುವ SNA ಖಾತೆಗಳನ್ನು ನಿರ್ವಹಿಸುವ ಕುರಿತು ಮುಂದುವರಿದ ಮಾರ್ಗಸೂಚಿಗಳನ್ನು ನೀಡುವ ಅವಶ್ಯಕತೆ ಇರುವುದರಿಂದ ಈ ಕೆಳಕಂಡಂತೆ ಮಾರ್ಗಸೂಚಿ ನೀಡಲು ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ(3)ರ ಕಡತದಲ್ಲಿ ಖಜಾನೆ ಆಯುಕ್ತರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 39 ಟಿಎಆರ್ 2022**
**ಬೆಂಗಳೂರು, ದಿನಾಂಕ: 09-05-20222.**

**ಕೇಂದ್ರ ಪುರಸ್ಕೃತ ಯೋಜನೆ ಅನುಷ್ಠಾನಗೊಳಿಸುವ ಇಲಾಖೆಗಳು ಸರ್ಕಾರದ ಆದೇಶ ಸಂ:ಆಇ 39 ಟಿಎಆರ್ 2022, ದಿ:28.04.2022 ರಲ್ಲಿನ ಸೂಚನೆಗಳನ್ನು ಅನುಸರಿಸುವ ಜೊತೆಗೆ ಬ್ಯಾಂಕುಗಳಲ್ಲಿ ತೆರೆಯಲಾದ SNA ಖಾತೆಗಳನ್ನು ನಿರ್ವಹಿಸುವ ಕುರಿತು ಕೆಳಕಂಡ ನಿರ್ದೇಶನಗಳನ್ನು ಪಾಲಿಸುವಂತೆ ತಿಳಿಸಲಾಗಿದೆ.**

1. SNA ಖಾತೆಗಳಿಗೆ ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ

ಕೇಂದ್ರ ಮತ್ತು ರಾಜ್ಯದ ಪಾಲುಗಳನ್ನು ಜಮೆ ಮಾಡುವುದು.

2. SNA ಖಾತೆಗಳ ಮೂಲಕ ಕೇಂದ್ರ ಪುರಸ್ಕೃತ ಯೋಜನೆ ಜಾರಿಗೊಳಿಸುವ ಡಿಡಿಓ ಗಳು ಸದರಿ SNA/IA ಖಾತೆಯಿಂದ ಪಾವತಿಗಳನ್ನು ಪ್ರಾಧೀಕರಿಸಲು ಖಜಾನಾಧಿಕಾರಿಗಳಿಗೆ ಅಧಿಕಾರ ನೀಡುವ ಇದರೊಂದಿಗೆ ಲಗತ್ತಿಸಿದ **ಅನುಬಂಧದಲ್ಲಿ** ನೀಡಿರುವ ನಮೂನೆಯಲ್ಲಿ ಪ್ರಾಧಿಕಾರ ಪತ್ರವನ್ನು (Letter of Authorisation) ಸಂಬಂಧಿಸಿದ ಬ್ಯಾಂಕ್‌ಗಳಿಗೆ ನೀಡುವುದು.
3. ಅನುಷ್ಠಾನಾಧಿಕಾರಿಗಳು ಅವಶ್ಯಕತೆಯಿರುವ ಮೊತ್ತಗಳಿಗೆ ಕ್ಲೈಮ್ ಅನ್ನು ಸಂಬಂಧಿಸಿದ ಖಜಾನೆಗೆ ಖಜಾನೆ-2 PFMS ಮಾಡ್ಯೂಲ್ ನಲ್ಲಿ ಬಿಲ್ಲುಗಳ ಮೂಲಕ ಸಲ್ಲಿಸುವುದು. ಖಜಾನಾಧಿಕಾರಿಗಳು SNA/IA ಖಾತೆಯಲ್ಲಿ ಲಭ್ಯವಿರುವ ಶಿಲ್ಕಿನ ಮಿತಿಯೊಳಗೆ ಸದರಿ ಮೊತ್ತವನ್ನು ಪಾವತಿಸುವಂತೆ ಡಿಜಿಟಲ್ ಸಹಿಯುಳ್ಳ ಪಾವತಿ ಆದೇಶವನ್ನು(payment advice) ಬ್ಯಾಂಕ್‌ಗಳಿಗೆ ನೀಡುವುದು.
4. ಬ್ಯಾಂಕ್‌ಗಳು ಸದರಿ ಪಾವತಿ ಆದೇಶದಲ್ಲಿ ಪ್ರಾಧೀಕರಿಸಿರುವ ಮೊತ್ತವನ್ನು ಅನುಷ್ಠಾನಾಧಿಕಾರಿಗಳಿಗೆ ಪಾವತಿಸುವುದು. ಖಜಾನಾಧಿಕಾರಿಗಳ ಅಧಿಕೃತ ಪಾವತಿ ಆದೇಶಗಳಿಲ್ಲದೇ ಯಾವುದೇ ಮೊತ್ತವನ್ನು ಬ್ಯಾಂಕ್‌ಗಳು ಪಾವತಿಸುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Signed by Shobha Ha
Date: 09-05-2022 18:18:47
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ)

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ/ಕಾರ್ಯದರ್ಶಿಗಳು.
5. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
6. ಯೋಜನಾ ನಿರ್ದೇಶಕರು, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ-2, (HRMS-2.0) 5 ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಖಜಾನೆಗಳಿಗೆ- ಖಜಾನೆ ನಿರ್ದೇಶಕರ ಮೂಲಕ.
10. ಎಲ್ಲಾ ಏಜೆನ್ಸಿ ಬ್ಯಾಂಕುಗಳಿಗೆ-ಆಯಾ ಜಿಲ್ಲಾ ಖಜಾನೆಗಳ ಮೂಲಕ .

Department of ....................
Government of Karnataka, Bangalore

Date: ................................

LETTER OF AUTHORISATION

Ref:

i) Government of India ,Office Memorandum F.No.1(13) PFMS dated 23/03/2021
ii) G.O No FD 39 TAR 2022 bangalore Dated: 09/05/2022 issued by Finance Department, Govt of Karnataka
iii) Government of India Office memorandum C-13015 (520)PrII/MFCGA /PFMS /CSS (EAT)/ 2021-22/1610 dataed 30th july 2021 Standard Operating Procedure (SOP) as advised by the Finance Department, Govt of Karnataka

The Department of ----------------------------Government of Karnataka (hereinafter called the Department) is the sole authorized and designated Department responsible to administer the ------------------------- central sponsored scheme in the state of Karnataka.

In terms of the guidelines advised by the GoI as also GoK, the Department has opened an Single Nodal Agency Account (SNA A/c) number ------------------------- in the ------------------------------Bank. The bank in turn has agreed to provide the required banking and operational support services to the Department for implementation of PFMS in respect of the subject scheme upto the Implementation Agency (IA) level in the State of Karnataka.

The said SNA A/c s in the name of the Department and the drawal of funds from the said SNA A/c will be through the Treasury bills only under digital signature of Drawing and disbursing officer of our Department and Treasury officer

Through this letter of authorisation, the Department is therefore authorsing the Treasury Officer concerned to issue payment advises

to the bank as and when bills are presented by the Department and by debiting of the said SNA A/c and remit the proceeds to the credit of the Bank account/s of the beneficiary/ies concerned.

Authorised Signatory (HOD)
Department of ....................................

T0
The Branch-in-charge
......................Bank